# ತಾಯಿಯ ಭಾವುಕ ಸ್ಮರಣೆ

ನಟ ಬೊಮನ್ ಇರಾನಿ ತಾಯಿ ಜೂನ್ 9ರಂದು ವಯೋಸಹಜ ಬಳಲಿಕೆಯಿಂದ ನಿಧನರಾದರು. ಕೋವಿಡ್ ಕಾಲಘಟ್ಟದಲ್ಲಿ ಎಲ್ಲರೂ ಬದುಕಲು ಹೋರಾಟ ಮಾಡಿ, ಕಳೆದುಕೊಂಡವರ ನೆನೆದು ಕಣ್ಣೀರಿಡುವಂತಾಗಿದೆ. ಆದರೆ, ಬೊಮನ್ ತಾಯಿ ಅಗಲಿಕೆಯಲ್ಲೂ ಶಾಂತಚಿತ್ತವಿದೆ.

ತಮ್ಮ ತಾಯಿ ಅಗಲಿದ ಮೇಲೆ ಇನ್‌ಸ್ಟಾಗ್ರಾಂನಲ್ಲಿ ಅವರ ಚಿತ್ರದೊಂದಿಗೆ ಬೊಮನ್ ಬರೆದಿರುವ ಮಾತುಗಳು ಎಷ್ಟು ಆರ್ದ್ರವಾಗಿವೆ ಓದಿ:

‘ಅಮ್ಮ ಇರಾನಿ ಬೆಳಿಗ್ಗೆ ಮಲಗಿರುವಾಗ ಶಾಂತ ರೀತಿಯಲ್ಲಿ ಕೊನೆಯುಸಿರೆಳೆದಳು. ಜೆರ್ ಅಂತ ನಾನು ಕರೆಯುತ್ತಿದ್ದೆ. ಅವಳ ಹೆಸರು ಜೆರ್ಬನೂ. ಜೂನ್ 9 ಅವಳು ಅಗಲಿದಳು. ನನಗೆ 32 ವರ್ಷವಿದ್ದಾಗಿನಿಂದಲೂ ಅವಳು ಅಪ್ಪ–ಅಮ್ಮ ಎರಡೂ ಆಗಿದ್ದಳು. ಅವಳು ಸ್ಫೂರ್ತಿಯ ಚಿಲುಮೆ. ಅವಳಷ್ಟೇ ಹೇಳಬಹುದೆನಿಸಿದ್ದ ತಮಾಷೆಯ ಕಥೆಗಳನ್ನು ನಾನು ಕೇಳಿದ್ದೇನೆ. ಯಾವಾಗಲೂ ಅವಳು ಉದ್ದದ ಜೇಬಿನೊಳಗೆ ತನ್ನ ಕೈಗಳನ್ನು ಇಳಿಬಿಟ್ಟು ಇರುತ್ತಿದ್ದಳು. ಜೇಬುಗಳಲ್ಲಿ ಕೊಡಲು ಅವಳಲ್ಲಿ ಹೆಚ್ಚೇನೂ ಇರಲಿಲ್ಲವಾದರೂ ಅದು ಅವಳದ್ದೇ ಶೈಲಿ. ಕಾಂಪೌಂಡ್‌ನ ಎಲ್ಲ ಹುಡುಗರ ಜತೆಗೆ ನನ್ನನ್ನು ಸಿನಿಮಾ ನೋಡಲು ಕಳುಹಿಸುತ್ತಿದ್ದಳು. ಇಂಟರ್‌ವಲ್‌ನಲ್ಲಿ ಪಾಪ್‌ಕಾರ್ನ್ ತಿನ್ನಲು ಮರೆಯಬೇಡಿ ಎನ್ನುತ್ತಿದ್ದಳು. ಅವಳಿಗೆ ತಿನಿಸುಗಳೆಂದರೆ ತುಂಬಾ ಇಷ್ಟ. ತನ್ನಿಷ್ಟದ ಹಾಡುಗಳನ್ನು ಗುನುಗುತ್ತಿದ್ದಳು. ವಿಡಿಪೀಡಿಯಾ, ಐಎಂಡಿಬಿ ವೆಬ್ ಪುಟಗಳನ್ನು ಚಕಚಕನೆ ತೆಗೆದು ಓದುತ್ತಿದ್ದಳು. ಭಾರೀ ಶಾರ್ಪ್. ಅಗಲುವ ಹಿಂದಿನ ದಿನ ಮಲಾಯ್ ಕುಲ್ಫಿ ಹಾಗೂ ಮಾವಿನಹಣ್ಣು ತರಿಸಿಕೊಂಡಿದ್ದಳು. ಬೇಕಿದ್ದರೆ ಅವಳು ಚಂದ್ರನನ್ನೋ, ನಕ್ಷತ್ರವನ್ನೋ ಕೇಳಬಹುದಿತ್ತು. ಅವಳೇ ತಾರೆ. ಈಗ ನಿಜಕ್ಕೂ ತಾರೆಯಾಗಿಬಿಟ್ಟಳು’.

■ ವಿಶಾಖ ಎನ್.



# ಇನ್ನಷ್ಟು ಅಚ್ಚರಿಗಳೊಂದಿಗೆ ತಾಪ್ಸಿ



ಮಿಸ್ಟರಿ ಥ್ರಿಲ್ಲರ್‌ಗೂ ನಟಿ ತಾಪ್ಸಿ ಪನ್ನು ಅವರಿಗೂ ಏನೋ ನಂಟು. ಸ್ಪ್ಯಾನಿಷ್ ಚಿತ್ರದ ಹಿಂದಿ ರೀಮೇಕ್ ‘ಬದ್ಲಾ’ದಲ್ಲಿ ಅವರು ಗಮನ ಸೆಳೆದದ್ದು ಹಾಗೂ ‘ಬೇಬಿ’ ಚಿತ್ರದಲ್ಲಿ ಶಾಣ್ಯಾ ಪೊಲೀಸ್ ಆಗಿ ಕಣ್ಣರಳಿಸುವಂತೆ ಮಾಡಿದ್ದು ಅಂತಹ ಪ್ರಕಾರದ ಸಿನಿಮಾಗಳ ಮೇಲೆ ಅವರ ಪ್ರೀತಿಯನ್ನು ನೆನಪಿಸುತ್ತವೆ. ಈಗ ‘ಹಸೀನ್ ದಿಲ್‌ರುಬಾ’ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಮೂರು ಛಾಯೆ ಇರುವ ಪ್ರೀತಿಯ ಕಥೆ ಎಂಬ ಒಕ್ಕಣೆ ಅದರಲ್ಲಿ ಕಾಣುತ್ತಿದೆ.

ತಾಪ್ಸಿ ತಮ್ಮ ರಾಜಕೀಯ ನಿಲುವುಗಳಿಂದಲೂ ಗುರುತಾದವರು. ಹಲವರಿಂದ ಟ್ರೋಲ್‌ಗೆ ಒಳಗಾದರೂ ಅವರು ದೃಢ ಮನಸ್ಸಿನಿಂದ ತಮ್ಮದೇ ಆಯ್ಕೆಯ ಸಿನಿಮಾಗಳನ್ನು ಮಾಡುತ್ತಾ ಬಂದವರು. ಅನುಭವ್ ಸಿನ್ಹ ನಿರ್ದೇಶನದ ‘ಥಪ್ಪಡ್’ ಚಿತ್ರದ ಅಭಿನಯದ ಮೂಲಕ ಅವರು ಕಳೆದ ವರ್ಷ ಮನೆಮಾತಾಗಿದ್ದರು. ಅತಿ ಸೂಕ್ಷ್ಮ ಸಾಂಸಾರಿಕ ಸಮಸ್ಯೆಯೊಂದನ್ನು ಆಧರಿಸಿದ ಚಿತ್ರದ ಕಥನ ಅವರಿಗೂ ತುಂಬಾ ಇಷ್ಟವಾಗಿತ್ತು.

‘ನಾನು ಹಿಂದೆ ಒಂದು ತೆಲುಗು ಚಿತ್ರದಲ್ಲಿ ಅಭಿನಯಿಸಿದ್ದೆ. ಮೊದಲರ್ಧ ನನ್ನ ಪಾತ್ರಕ್ಕೆ ಹೆಚ್ಚು ಅವಕಾಶ ಅದರಲ್ಲಿ ಇತ್ತು. ಆಮೇಲೆ ಪಾತ್ರ ನಾಪತ್ತೆ. ಇನ್ನೇನು ಸಿನಿಮಾ ಮುಗಿಯಲು ಕೆಲವು ನಿಮಿಷಗಳಿವೆ ಎನ್ನುವಾಗ ಮತ್ತೆ ನನ್ನ ಪಾತ್ರ ಪ್ರತ್ಯಕ್ಷವಾಯಿತು. ಆ ಚಿತ್ರವನ್ನು ನಾನು ಜನರ ಮಧ್ಯೆ ಕುಳಿತು ನೋಡಿದ್ದೆ. ನನ್ನ ಪಾತ್ರ ಮರುಪ್ರವೇಶವಾದದ್ದೇ ಅವರಿಗೆಲ್ಲ ಖುಷಿಯಾಯಿತು. ಸಿನಿಮಾದ ಪಾತ್ರ ಚಿಕ್ಕದು, ದೊಡ್ಡದು ಎನ್ನುವುದಕ್ಕಿಂತ ಪ್ರೇಕ್ಷಕರು ಈ ರೀತಿ ನಿರೀಕ್ಷಿಸುವಂತೆ ಇರಬೇಕು ಎನ್ನುವುದು ನನ್ನ ಅನುಭವ. ‘ಮಿಷನ್ ಮಂಗಲ್’ ಚಿತ್ರದಲ್ಲಿ ಸಣ್ಣ ಪಾತ್ರದಲ್ಲಿ ನಾನು ಅಭಿನಯಿಸಿದೆ. ಆದರೆ, ಅದು ಕಥೆಯ ಭಾಗವಾಗಿ ಮುಖ್ಯವಾಗಿತ್ತು. ಈಗ ನಾನು ಪಾತ್ರದ ತೂಕವನ್ನು ಗಮನಿಸಿಯೇ ಚಿತ್ರಗಳನ್ನು ಒಪ್ಪಿಕೊಳ್ಳುತ್ತಿರುವುದು. ‘ಹಸೀನ್ ದಿಲ್‌ರುಬಾ’ ಚಿತ್ರದಲ್ಲಿಯೂ ನೋಡುಗರಿಗೆ ಹಲವು ಅಚ್ಚರಿಗಳಿವೆ. ಟೀಸರ್‌ನಲ್ಲಿ ಹೇಳದೇ ಇರುವ ಎಷ್ಟೋ ವಿಷಯಗಳು ನೋಡಲು ಬಾಕಿ ಇವೆ’ ಎನ್ನುವುದು ತಾಪ್ಸಿ ಮಾತು.

ವಿನಿಲ್ ಮ್ಯಾಥ್ಯೂ ನಿರ್ದೇಶನದ ಚಿತ್ರ ‘ಹಸೀನ್ ದಿಲ್‌ರುಬಾ’. ಏಳು ವರ್ಷಗಳ ಹಿಂದೆ ಅವರು ‘ಹಸೀಂ ತೊ ಫಸೀ’ ಹಿಂದಿ ಚಿತ್ರವನ್ನು ನಿರ್ದೇಶಿಸಿದ್ದರು. ಜಾಹೀರಾತು ಸಿನಿಮಾ ನಿರ್ದೇಶನದ ಮೂಲಕ ಹೆಸರಾದವರು ಅವರು. ■